ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ
ಸಿ ಸಿ ನಂಬರ :213/2023
CW-8 PW-5

ಹೆಸರು : ಪರಶುರಾಮ ವಡ್ಡರ
ತಂದೆ :ಹನುಮಂತಪ್ಪ
ವಯಸ್ಸು : 57 ವರ್ಷ
ಉದ್ಯೋಗ : ಅಬಕಾರಿ ನೀರಿಕ್ಷಕರುದ ಹರಪನಳ್ಳಿವಲಯ,
ವಿಜಯನಗರ ಜಿಲ್ಲೆ
ವಾಸಸ್ಥಳ : ಹರಪನಳ್ಳಿ

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16–06–2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 31-07-2021 ರಿಂದ 26-09-2025 ರವರೆಗೆ ನಾನು ಗದಗ ಉಪವಿಭಾಗದಲ್ಲಿ ಅಬಕಾರಿ ನೀರಿಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ನಾನು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ರವರಿಂದ ದಿಃ 09-12-2022 ರಂದು ಪಡೆದು ಪರಿಶೀಲಿಸಿದ್ದೇನೆ. ಅದೇ ದಿನ ದಾಳಿಯಲ್ಲಿ ಪಾಲ್ಗೊಂಡ ಸಿಬ್ಬಂದಿಯವರಾದ ಚಾಸಾ-4 ಮತ್ತು 5 ರವರ ಹೇಳಿಕೆ ಪಡೆದಿದ್ದೇನೆ. ದಿಃ 21-12-2022 ರಂದು ಮನೆಯ ಮಾಲಿಕತ್ವದ ಕುರಿತು ಪಿ.ಡಿ.ಓ ಗುಳಗುಳಿ ರವರಿಗೆ ಪತ್ರದ ಮುಖೆನ ವರದಿ ನೀಡಲು ಕೊರಲಾಗಿತ್ತು. ಅದೇ ದಿನ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮು.ಮಾ ಅನ್ನು ರಾಸಾಯನಿಕ ಪರಿಕ್ಷೇಗೆ ಚಾಸಾ-6 ರವರನ್ನು ಕಳುಹಿಸಿಕೊಡಲಾಯಿತು. ದಿಃ 22-12-2022 ರಂದು ಅವರಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡು ಅವರ ಹೇಳಿಕೆ ಪಡೆಯಲಾಯಿತು. ದಿಃ 05-01-2023 ರಂದು ಸದರಿ ಪಿ.ಡಿ.ಓ ರವರಿಂದ ಮನೆಯ ಮಾಲಿಕತ್ವದ ಕುರಿತು ಉತಾರೆ ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಅದೇ ದಿನ ಮನೆಯ ಮಾಲಿಕರಾದ 2 ನೇ ಆರೋಪಿಗೆ ನೋಟಿಸ ನೀಡಲಾಯಿತು. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಅಂತಿಮ ದೋಷಾರೋಪಣ ಪತ್ರ ಸಲ್ಲಿಸಲಾಯಿತು.

ಸಾಕ್ಷಿಯು ದಿಃ 21-12-2022 ರ ಪ್ರಾದೇಶಿಕ ಸಹಾಯಕ ರಸಾಯನಿಕ ವಿಶ್ಲೇಷಕರು, ಧಾರವಾಡ ವಲಯ, ಧಾರವಾಡ ರವರಿಗೆ ನೀಡಿದ ಹೇಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 21-12-2022 ರ ರಸಾಯನಿಕ ಪರಿಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಆರೋಪಿತರ ಪರ ವಕೀಲರ ಸಮ್ಮತಿಯ ಮೇರೆಗೆ ಅದನ್ನು ನಿ.ಪಿ-7 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 21-12-2022 ರ ಪಿ.ಡಿ.ಓ ಗುಳಗುಳಿ ರವರಿಗೆ ನೀಡಿದ ವಿನಂತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-8 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು

ನಿ.ಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆಸ್ತಿ ನಂ.79/ಎ ನೇದ್ದರ ಉತಾರೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-9 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 05-01-2023 ರ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-10 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-10(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಯಾವುದೇ ತನಿಖೆ ಕೈಗೊಂಡಿಲ್ಲ, ಆರೋಪಿತರು ಯಾವುದೇ ತಪ್ಪು ಮಾಡಿಲ್ಲ, ರಸಾಯನಿಕ ಪರಿಕ್ಷಾ ವರದಿಗಾಗಿ ಸಿಬ್ಬಂದಿಯನ್ನು ಕಳುಹಿಸಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ ವರದಿ ಪಡೆದು ಠಾಣಾ ಅಂಕೆ-ಸಂಖ್ಯೆಗೊಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಖೊಟ್ಟಿ ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮು.ಮಾಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.